# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

( ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ )


ಫೋನ್ ನಂ:08274-247088.
Email:aeegkl@gmail.com

ಸಹಾಯಕಕಾರ್ಯ ನಿರ್ವಾಹಕಇಂ(ವಿ),ರವರಕಛೇರಿ,
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಗೋಣಿಕೊಪ್ಪಲು-571213.


ಸಂಖ್ಯೆ:ಜಿಕೆ:ಸಕಾಇಂ(ವಿ):ಸಇಂ(ತಾ)/ಹಿಸ/2019-20/ ದಿನಾಂಕ: 29-06-2019.

## ಸಭಾ ನಡಾವಳಿ

ದಿನಾಂಕ: 29-06-2019 ರಂದು ಗೋಣಿಕೊಪ್ಪಲು ಉಪ ವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರಕೊಡಗು ರವರ ನೇತೃತ್ವದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಗೋಣಿಕೊಪ್ಪಲು ಉಪ ವಿಭಾಗದ ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಮಂಜುನಾಥ್, ಅಧೀಕ್ಷಕಇಂಜಿನಿಯರ್(ವಿ), ಚಾಮರಾಜನಗರಕೊಡಗು ವೃತ್ತ.
2. ಶ್ರೀ ಸೋಮಶೇಖರ್, ಕಾರ್ಯ ನಿರ್ವಾಹಕಇಂಜಿನಿಯರ್(ವಿ), ಮಡಿಕೇರಿ ವಿಭಾಗ.
3. ಶ್ರೀ ಪಿ. ಎನ್. ದೇವಯ್ಯ, ಸ.ಕಾ.ನಿ.ಇಂ(ವಿ),ಮಡಿಕೇರಿ ವಿಭಾಗ,
4. ಶ್ರೀ ಎಂ. ಅಂಕಯ್ಯ, ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
5. ಶ್ರೀ ಉಮೇಶ್, ಸ.ಇಂ(ತಾಂ),ಗೋಣಿಕೊಪ್ಪಲು.
6. ಶ್ರೀ ಬಿ. ಪಿ. ಜಗದೀಶ್, ಹಿರಿಯ ಸಹಾಯಕ ಗೋಣಿಕೊಪ್ಪಲು ಉಪ-ವಿಭಾಗ.
7. ಶ್ರೀ ಎಸ್. ಆರ್. ಕೃಷ್ಣಕುಮಾರ್, ಕಿರಿಯಇಂಜಿನಿಯರ್, ಗೋಣಿಕೊಪ್ಪಲು ಶಾಖೆ.
8. ಶ್ರೀ ಎಂ. ಇ. ವಿಜಯ ಕುಮಾರ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
9. ಶ್ರೀ ಹೆಚ್. ಜಿ. ಮನುಕುಮಾರ್, ಪ್ರಭಾರ ಶಾಖಾಧಿಕಾರಿ, ಬಾಳೆಲೆ ಶಾಖೆ.

ದಿನಾಂಕ: 29-06-2019 ರಂದು ಪಡೆದ ದೂರುಗಳ ವಿವರ:-

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡಕ್ರಮ. |
|---|---|---|---|
| 1 | ಕಾಸಿ, ಕರುಂಬಯ್ಯ, ಲಕ್ಕುಂದ ಗ್ರಾಮ ಕೋಟೂರು. | ★ ಇವರು ತಮ್ಮ ಮನೆಯ ಹತ್ತಿರವಿರುವ ವಿದ್ಯುತ್ ತಂತಿಗಳು ತುಂಬಾ ಕೆಳಮಟ್ಟದಲ್ಲಿರುವುದಾಗಿ ಹಾಗೂ ಮುರಿದ ಕಂಬ ಬದಲಿಸುವುದಾಗಿ ಕೋರಿರುತ್ತಾರೆ. | ★ ಶ್ರೀಮಂಗಲ ಶಾಖಾಧಿಕಾರಿ ರವರು ಮಾತನಾಡಿ ಒಂದು ವಾರದ ಕಾಲ ಮಿತಿಯಲ್ಲಿ ಕೆಲಸ ಮುಗಿಸುವುದಾಗಿ ಸಭೆಯಲ್ಲಿ ತಿಳಿಸಿದರು.<br>ಅಧೀಕ್ಷ ಇಂಜಿನಿಯರ್ ಮತ್ತು ಕಾರ್ಯ ನಿರ್ವಾಹಕ ಇಂಜಿನಿಯರ್ ಮಾತನಾಡಿ ಕಂಬ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು. |
| 2 | ಬಿ. ಎಲ್. ಬಾಲಕೃಷ್ಣ, ಮಾಜಿ ಪುರಸಭಾ ಸದ್ಯಸ್ಯರು ಸಿಗೇತ್ತೋಡು. | ★ ಇವರು ತಮ್ಮ ಮನೆಗೆ ವಿದ್ಯುತ್ ಸರಬರಾಜಿನ ಸಮಸ್ಯೆ ಇರುವುದಾಗಿ ವಿದ್ಯುತ್ ತಂತಿಗೆ ಮರದ ಗರಿ, ರಂಬೆಗಳು, ತಗುಲುತ್ತಿರುವುದರಿಂದ ಜಂಗಲ್‌ಕಟ್ಟಿಂಗ್ ಮಾಡಿಕೊಡುವಂತೆ ಕೋರಿದರು. | ★ ಗೋಣಿಕೊಪ್ಪಲು ಶಾಖಾಧಿಕಾರಿಯವರು ಮಾತನಾಡಿ ಗರಿ ಮತ್ತು ಮರದ ರಂಬೆಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.<br>ಅಧೀಕ್ಷ ಇಂಜಿನಿಯರ್ ಮತ್ತು ಕಾರ್ಯ ನಿರ್ವಾಹಕ ಇಂಜಿನಿಯರ್ ಮಾತನಾಡಿ ಜಂಗಲ್ ಕಟ್ಟಿಂಗ್ ಹಾಗೂ ಮಾರ್ಗದ ನಿರ್ವಹಣೆ ಮಾಡುವುದಾಗಿ ಸೂಚಿಸಿದರು. |
| 3 | ಸಿ. ಎಂ. ಅಯ್ಯಣ್ಣ, ಬೇಗೂರು ಗ್ರಾಮ. | ★ ಇವರು ತಮ್ಮ ಸ್ಥಾವರಕ್ಕೆ ಕಡಿಮೆ ವೋಲ್ಟೇಜ್ ಸಮಸ್ಯೆ ಇರುವುದಾಗಿ ಹಾಲಿ ಇರುವ ಲೈನಿನ ಬದಲಾಗಿ ಪೊನ್ನಂಪೇಟೆ ಮಾರ್ಗದ ಮೂಲಕ ವಿದ್ಯುತ್ ಸರಬರಾಜು ಮಾಡಿಸುವಂತೆ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.<br>ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಗೋಣಿಕೊಪ್ಪಲು ರವರು ಮಾತನಾಡಿ ಗೋಣಿಕೊಪ್ಪಲು ಶಾಖಾಧಿಕಾರಿ ಹಾಗೂ ಶ್ರೀಮಂಗಲ ಶಾಖಾಧಿಕಾರಿ ಯವರೊಡನೆ ಸ್ಥಳ ಪರಿಶೀಲಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. |
| 4 | ಪೊನ್ನಪ್ಪ ಎ. ಕೆ., ಬಾಡಗರಕೇರಿ. | ★ ಇವರು ತಮ್ಮ ಗ್ರಾಮದಲ್ಲಿ | ★ ಶ್ರೀಮಂಗಲ ಶಾಖಾಧಿಕಾರಿ ರವರು ಮಾತನಾಡಿ |

| | | | |
|---|---|---|---|
| | | ಕೋರಿರುತ್ತಾರೆ. | ತಿಳಿಸಿದರು. |
| 5 | ಪೂವಪ್ಪ, ಕೆ.ಬಾಡಗ. | ★ ಇವರು ತಮ್ಮ ಮನೆಯ ಹತ್ತಿರವಿರುವ ವಿದ್ಯುತ್ ತಂತಿಗಳು ತುಂಬಾ ಕೆಳಮಟ್ಟದಲ್ಲಿರುವುದಾಗಿ ಹಾಗೂ ಜಂಗಲ್‌ಕಟ್ಟಿಂಗ್ ಮಾಡಿಸಿಕೊಡುವಂತೆ ಕೋರಿರುತ್ತಾರೆ. | ★ ಶ್ರೀಮಂಗಲ ಶಾಖಾಧಿಕಾರಿ ರವರು ಮಾತನಾಡಿ ಎಫ್-1 ಕಾನೂರು ಮಾರ್ಗದ ಜಂಗಲ್‌ಕಟ್ಟಿಂಗ್ 07-07-2019ರ ಒಳಗೆ ಮಾಡಿಸುವುದಾಗಿ ತಿಳಿಸಿದರು. . |
| 6 | ನಾಚಪ್ಪ, ನಾಲ್ಕೇರಿ. | ★ ಇವರು ತಮ್ಮ ಮನೆಗೆ ಮತ್ತು ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ಇರುವುದಾಗಿ ನಿರಂತರವಾಗಿ ವಿದ್ಯುತ್ ಅಡಚಣೆ ಆಗುತ್ತಿರುವುದಾಗಿ ಸರಿಪಡಿಸಲು ಕೋರಿರುತ್ತಾರೆ. | ★ ಶ್ರೀಮಂಗಲ ಶಾಖಾಧಿಕಾರಿ ರವರು ಮಾತನಾಡಿ ಎಫ್-1 ಕಾನೂರು ಮಾರ್ಗದ ಜಂಗಲ್‌ಕಟ್ಟಿಂಗ್ 07-07-2019ರ ಒಳಗೆ ಮಾಡಿಸುವುದಾಗಿ ತಿಳಿಸಿದರು. |
| 7 | ರಾಧಾಕೃಷ್ಣ, ಗೋಣಿಕೊಪ್ಪಲು. | ★ ಇವರು ತಮ್ಮ ಮನೆಗೆ ಹೊಸ ಸಂಪರ್ಕ ಪಡೆಯಲು 3 ಕಂಬಗಳ ಅವಶ್ಯಕತೆ ಇದ್ದು ನಿಗಮದ ವತಿಯಿಂದ ಹಾಕಿಸಿ ಕೊಡಬೇಕಾಗಿ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಅರ್ಜಿದಾರರಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲು ಬೇಕಾದ ದಾಖಲಾತಿಗಳ ಬಗ್ಗೆ ವಿವರ ನೀಡುವಂತೆ ಸ ಇಂ. (ತಾ), ರವರಿಗೆ ಸೂಚಿಸಿರುತ್ತಾರೆ. |

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಕಾ ಮತ್ತು ಪಾಲನೆ ಉಪವಿಭಾಗ,
ಗೋಣಿಕೊಪ್ಪಲು.

ಪ್ರತಿಯನ್ನು:-

1. ಶಾಖಾಧಿಕಾರಿಗಳು, ಗೋಣಿಕೊಪ್ಪ, ಶ್ರೀಮಂಗಲ ಮತ್ತು ಬಾಳೆಲೆ ರವರಿಗೆ ಕಳುಹಿಸುತ್ತಾ ನೀವುಗಳು ನಿಮ್ಮ ವ್ಯಾಪ್ತಿಗೆ ಬರುವ ದೂರುಗಳ ಬಗ್ಗೆ ಕ್ರಮ ವಹಿಸಿ ವರದಿ ಕೊಡುವುದು.
2. ಕಛೇರಿ ಪ್ರತಿ.